# ಬರಹ ನವನವೀನ

**ಅರ್ಜುನ್ ಸರ್ಜಾ ಪುತ್ರಿ ಐಶ್ವರ್ಯಾ 'ಪ್ರೇಮ ಬರಹ' ಚಿತ್ರದ ಮೂಲಕ ಕನ್ನಡ ಪ್ರೇಕ್ಷಕರ ಎದುರುಬರಲಿದ್ದಾಳೆ. ಮಗಳ ನಟನೆ, ಅಪ್ಪನ ನಿರ್ದೇಶನ ಎನ್ನುವ ಕಾರಣಕ್ಕೆ ಈ ಚಿತ್ರ ಗಾಂಧಿನಗರದ ಗಮನಸೆಳೆದಿದೆ.**

■ ರಘು

ಅಪ್ಪ ನನ್ನ ಪಾಲಿಗೆ ಗುರುವೂ ಹೌದು, ಮಾರ್ಗದರ್ಶಿ ರೂಪದ ಗೆಳೆಯನೂ ಹೌದು. ಇಷ್ಟು ಮಾತ್ರವಲ್ಲ – ಓರ್ವ ವ್ಯಕ್ತಿಯಾಗಿಯೂ ಅಪ್ಪ ನನಗೆ ಮಾದರಿ. ಅವರಂತೆ ಆಗಲು ಪೂರ್ಣಪ್ರಮಾಣದಲ್ಲಿ ಸಾಧ್ಯವಾಗದಿದ್ದರೂ, ಅಪ್ಪನ ಗುಣದಲ್ಲಿ ಅರ್ಧದಷ್ಟು ಗುಣಗಳು ನನಗೆ ಬಂದರೂ ಬದುಕಿನ ಹೊಳಪೇ ಬದಲಾಗುತ್ತದೆ.

ಐಶ್ವರ್ಯಾ ಅವರ ಮಾತುಗಳಲ್ಲಿ ಅಪ್ಪನ ಕುರಿತು ಮೆಚ್ಚುಗೆ ಹಾಗೂ ಗೌರವ ಒಟ್ಟಿಗೆ ಕಾಣಿಸುತ್ತವೆ. ಐಶ್ವರ್ಯಾ ದಕ್ಷಿಣ ಭಾರತದ ಖ್ಯಾತ ನಟನಿರ್ದೇಶಕ ಅರ್ಜುನ್ ಸರ್ಜಾ ಅವರ ಪುತ್ರಿ. ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ನಾಯಕಿಯಾಗಿ ಗುರ್ತಿಸಿಕೊಳ್ಳಲು ತವಕಿಸುತ್ತಿರುವ ಪ್ರತಿಭೆ.

'ಪ್ರೇಮ ಬರಹ' ಐಶ್ವರ್ಯಾ ನಾಯಕಿಯಾಗಿ ನಟಿಸಿರುವ ಕನ್ನಡದಲ್ಲಿನ ಚೊಚ್ಚಲ ಸಿನಿಮಾ. ಮಗಳನ್ನು ನಾಯಕಿಯನ್ನಾಗಿ ಕನ್ನಡ ಪ್ರೇಕ್ಷಕರಿಗೆ ಪರಿಚಯಿಸುವ ಜವಾಬ್ದಾರಿಯನ್ನು ಸ್ವತಃ ಅರ್ಜುನ್ ಸರ್ಜಾ ತೆಗೆದುಕೊಂಡಿದ್ದಾರೆ. ಚಿತ್ರದ ನಿರ್ಮಾಣದ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಅವರು ವಹಿಸಿಕೊಂಡಿದ್ದಾರೆ. ಮಗಳ ಸಿನಿಮಾ ಭವಿಷ್ಯದ ಮುನ್ನುಡಿಯನ್ನು ಅಪ್ಪನೇ ಬರೆಯಲು ಹೊರಟಿರುವ ವಿಶಿಷ್ಟ ಪ್ರಯತ್ನವಿದು. ಕಥೆ, ಚಿತ್ರಕಥೆ ಕೂಡ ಅವರದೇ.

ಮುಂಬಯಿ, ಬೆಂಗಳೂರಿನ ಜೊತೆಗೆ ಸ್ವಿಟ್ಜರ್ಲೆಂಡ್, ಇಟಲಿಯಲ್ಲೂ ಚಿತ್ರದ ಶೂಟಿಂಗ್ ನಡೆಸಲಾಗಿದೆ. ವೇಣು ಛಾಯಾಗ್ರಹಣದಲ್ಲಿ 'ಪ್ರೇಮ ಬರಹ' ರಮ್ಯ ಕಲಾಕೃತಿಯಂತೆ ಮೂಡಿಬಂದಿದೆಯಂತೆ.

ಚಿತ್ರದಲ್ಲಿನ ಗೀತೆಗಳ ಸಂಗೀತ ಸಂಯೋಜನೆ ಜೆಸ್ಸಿ ಗಿಫ್ಟ್ ಅವರದು. ಎರಡು ದಶಕಗಳ ಹಿಂದೆ ಅರ್ಜುನ್ ಸರ್ಜಾ ನಟನೆಯಲ್ಲಿನ 'ಪ್ರತಾಪ್' ಚಿತ್ರದಲ್ಲಿ 'ಪ್ರೇಮ ಬರಹ ಕೋಟಿ ತರಹ' ಎನ್ನುವ ಗೀತೆಯಿತ್ತು. ಹಂಸಲೇಖಾ ಸಂಯೋಜನೆಯ ಆ ಜನಪ್ರಿಯ ಗೀತೆಯನ್ನು ಮಗಳ ಚಿತ್ರದಲ್ಲೂ ಅರ್ಜುನ್ ಬಳಸಿಕೊಂಡಿದ್ದಾರೆ.

ಚಿತ್ರದ ವಿಶೇಷ ಆಕರ್ಷಣೆ ಎನ್ನಬಹುದಾದ ಗೀತೆಯೊಂದರಲ್ಲಿ ಸರ್ಜಾ ಕುಟುಂಬದ ಸದಸ್ಯರು ಕಾಣಿಸಿಕೊಂಡಿದ್ದಾರಂತೆ. ಚಿರಂಜೀವಿ ಸರ್ಜಾ, ಧ್ರುವ ಸರ್ಜಾ ಜೊತೆಗೆ ದರ್ಶನ್ ಕೂಡ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರಂತೆ.

'ಪ್ರೇಮ ಬರಹ' ಶೀರ್ಷಿಕೆಯೇ ಚಿತ್ರದ ಕಥೆಯ ಸುಳಿವನ್ನು ಬಿಟ್ಟುಕೊಡುವಂತಿದೆ. ಆದರೆ, ಇದನ್ನೊಂದು ಪ್ರೇಮಕಥೆಯ ಸಿನಿಮಾ ಎಂದಷ್ಟೇ ಬ್ರಾಂಡ್ ಮಾಡಲು ಚಿತ್ರತಂಡ ಸಿದ್ಧವಿಲ್ಲ. ಚಿತ್ರಕಥೆಗೆ ಸಾಕಷ್ಟು ಆಯಾಮಗಳಿದ್ದು, ಅದರಲ್ಲಿ ಪ್ರೇಮವೂ ಒಂದೆನ್ನುವುದು ಐಶ್ವರ್ಯಾ ಅನಿಸಿಕೆ. ಚಿತ್ರದಲ್ಲಿ ಅವರದು ಪತ್ರಕರ್ತೆಯ ಪಾತ್ರ. ಕೆಲಸದ ಜೊತೆಗೆ ತುಂಟತನದಲ್ಲೂ ನಿಸ್ಸೀಮಳಾಗಿರುವ ಯುವತಿಯ ಬದುಕಿನ ತವಕತಲ್ಲಣದ ಪಾತ್ರ ಅವರಿಗೆ ಖುಷಿ ಕೊಟ್ಟಿದೆ. ಭಾವನೆಗಳ ಅಭಿವ್ಯಕ್ತಿಗೂ ಪಾತ್ರದಲ್ಲಿ ಸಾಕಷ್ಟು ಅವಕಾಶವಿದ್ದುದು ಐಶ್ವರ್ಯಾಗೆ ಖುಷಿ ಕೊಟ್ಟಿದೆ.

'ಲವ್ ಯು ಆಲಿಯಾ' ಚಿತ್ರದಲ್ಲಿ ನಟಿಸಿದ್ದ ಚಂದನ್ 'ಪ್ರೇಮ ಬರಹ'ದ ನಾಯಕ. ಕಿರುತೆರೆ ಧಾರಾವಾಹಿ ಹಾಗೂ 'ಬಿಗ್ ಬಾಸ್' ರಿಯಾಲಿಟಿ ಷೋ ಮೂಲಕ ಜನಪ್ರಿಯರಾಗಿರುವ ಚಂದನ್ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಈ ನಿಟ್ಟಿನಲ್ಲಿ 'ಪ್ರೇಮ ಬರಹ' ತಮ್ಮ ಪಾಲಿಗೆ ಮಹತ್ವದ ಚಿತ್ರವಾಗಬಹುದು ಎನ್ನುವ ನಿರೀಕ್ಷೆ ಅವರದು.

ಸುಹಾಸಿನಿ, ರಂಗಾಯಣ ರಘು, ಸಾಧು ಕೋಕಿಲಾ ಅವರಂಥ ಹಿರಿಯ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಹಿರಿಯರೊಂದಿಗೆ ನಟಿಸಿದ್ದು ಕೂಡ ಐಶ್ವರ್ಯಾ ಪಾಲಿಗೆ ವಿಶೇಷ ಅನುಭವವಾಗಿ ಪರಿಣಮಿಸಿದೆ.

ಹಳೆ ಬೇರು ಹೊಸ ಚಿಗುರಿನ ರೂಪದ 'ಪ್ರೇಮ ಬರಹ' 'ಪ್ರೇಮಿಗಳ ದಿನ'ಕ್ಕೆ ಮುನ್ನುಡಿಯ ರೂಪದಲ್ಲಿ ಫೆ. 9ರಂದು ತೆರೆ ಕಾಣುತ್ತಿದೆ.

■ ರಘು

